

ಡಾ.ವಿನೋದ ಛೆಬ್ಬಿ

**‘ಸುಮ್ಮನಿರು, ನಿನಗರ್ಥ ಆಗುವುದಿಲ್ಲ’ ಎನ್ನುವವರು ಹೆಚ್ಚಿನಂಶ ತಮ್ಮನ್ನು ತಾವೇ ಅರ್ಥ ಮಾಡಿಕೊಂಡಿರುವುದಿಲ್ಲ!**

# 133: ಪತಿಯೆಂಬ ಮಗು-1

ಎದುರು ಕುಳಿತವಳನ್ನು ಗಮನಿಸಿದೆ. ಇಪ್ಪತ್ತೇಳು ವರ್ಷದ ತರುಣಿ. ಮುಖ ಬಾಡಿದ್ದರೂ ದೃಢನಿರ್ಧಾರ ಕಾಣುತ್ತಿದೆ. ಆಕೆ ಆಡಿದ ಮೊದಲ ಮಾತು: ‘ನನ್ನ ದಾಂಪತ್ಯದ ಬಗೆಗೆ ಚರ್ಚಿಸಲು ಬಂದಿದ್ದೇನೆ. ನಿಮ್ಮ ದಿಟ್ಟವಾದ ಅಭಿಪ್ರಾಯ ಬೇಕು...’ ನನ್ನ ಕಡೆಗೆ ಪ್ರಶ್ನಾರ್ಥಕವಾಗಿ ನೋಡಿದಳು. ನಾನು ಸಮ್ಮತಿ ಸೂಚಿಸಿದಾಗ ತನ್ನ ಬಗೆಗೆ ಹೇಳಿಕೊಳ್ಳಲು ಶುರುಮಾಡಿದಳು.

ಕೀರ್ತಿಯು ಕಿಶೋರನನ್ನು (ನಿಜವಾದ ಹೆಸರುಗಳಲ್ಲ) ಮದುವೆಯಾಗಿದ್ದು ಎಂಟು ತಿಂಗಳ ಹಿಂದೆ. ಇದು ಹಿರಿಯರು ವ್ಯವಸ್ಥೆ ಮಾಡಿದ ವಿವಾಹ. ಇಬ್ಬರ ನಡುವೆ ಸಾಕಷ್ಟು ಆಕರ್ಷಣೆ ಇದೆ. ಕಾಮಕೂಟದಲ್ಲಿ ಇಬ್ಬರೂ ಯಥೇಷ್ಟ ತೃಪ್ತಿ ಹೊಂದುತ್ತಿದ್ದಾರೆ. ಹಾಗಾದರೆ ಸಮಸ್ಯೆ? ಇಬ್ಬರ ಸ್ವಭಾವಗಳಲ್ಲಿ ಸಹಿಸಲಾರದಷ್ಟು ವೈರುಧ್ಯಗಳಿವೆ. ಇದು ಗೊತ್ತಾಗಿದ್ದು ಮದುವೆಯಾದ ಹೊಸದರಲ್ಲೇ.

ಮದುವೆಯಾಗಿ ಮೂರು ತಿಂಗಳಾಗಿತ್ತಷ್ಟೆ. ಗಂಡಹೆಂಡತಿ ಕಿಶೋರನ ಆತ್ಮೀಯ ಸ್ನೇಹಿತನ ಮನೆಗೆ ಹೋಗಿದ್ದರು. ಅಂದಹಾಗೆ ಕಿಶೋರನೂ ಅವನ ಸ್ನೇಹಿತನೂ ತಂತ್ರಜ್ಞಾನದ ಕ್ಷೇತ್ರದಲ್ಲಿದ್ದು, ಭಿನ್ನ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾರೆ. ಸ್ನೇಹಿತ ಕಿಶೋರನಿಗೆ ಕೇಳಿದ: ‘ಆನ್‌ಸೈಟ್ ಕೆಲಸಕ್ಕೆ ಅಮೆರಿಕಾಗೆ ಹೋಗಬೇಕು ಅಂತಿದ್ದೆಯಲ್ಲ, ಹೋಗಿದ್ದೆಯಾ?’ ಕಿಶೋರ, ‘ಹೌದು, ಹೋದ ತಿಂಗಳು ಹೋಗಿದ್ದೆ. ಹತ್ತು ದಿನ ಇದ್ದೆ...’ ಎನ್ನುತ್ತ, ಕ್ಯಾಲಿಫೋರ್ನಿಯಾದ ಲಾಂಗ್ ಬೀಚ್‌ನಲ್ಲಿ ತಾನು ಕಂಡ ಅದ್ಭುತ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ. ಸ್ನೇಹಿತ ತಲೆದೂಗಿ ಹೇಳಿದ. ‘ವಾಹ್. ಎಷ್ಟೊಂದು ಮಜಾ ಅಲ್ಲವಾ?’ ಕಿಶೋರ ವಿಜಯದ ನಗು ಬೀರಿದ.

ಗಂಡ ನಿರರ್ಗಳ ಮಾತು ಆಡುತ್ತಿರುವಾಗ ಕೀರ್ತಿ ಏನು ಮಾಡುತ್ತಿದ್ದಳು? ಅವಾಕ್ಕಾಗಿ ಗಂಡನ ಮುಖ ನೋಡುತ್ತಿದ್ದಳು. ನಂತರ ಕಲ್ಲಿನಂತೆ ಕುಳಿತಳು. ಯಾಕೆ? ಕಿಶೋರ ಅಮೆರಿಕಾಗೆ ಏನು, ಎಲ್ಲೂ ಹೋಗಿರಲಿಲ್ಲ. ಮನೆಯಲ್ಲೇ ಇದ್ದ. ಯಾಕೆಂದರೆ ಅವನ ವೀಸಾ ಅರ್ಜಿ ತಿರಸ್ಕೃತವಾಗಿತ್ತು. ಅಷ್ಟಲ್ಲದೆ ಅವನು ಯಾವೊತ್ತೂ ದೇಶ ಬಿಟ್ಟು ಹೋದದ್ದಿಲ್ಲ!

‘ಕಿಶೋರ ಇಷ್ಟೊಂದು ಸರಳವಾಗಿ, ವಿನಾಕಾರಣ ಸುಳ್ಳುಹೇಳುತ್ತಾನೆ. ಮೌಲ್ಯಗಳಿಲ್ಲದ ಟೊಳ್ಳು ಮನುಷ್ಯನನ್ನು ಹೇಗೆ ನಂಬುವುದು?’ ಎಂದು ಉಸಿರಿಟ್ಟಳು.

ಸುಳ್ಳಿನ ಹಿಂದಿನ ಕಾರಣವನ್ನು ಕೇಳಿದಳಂತೆ. ವೀಸಾ ಸಿಗಲಿಲ್ಲವೆಂದರೆ ಸ್ನೇಹಿತ ತನ್ನನ್ನು ಕೀಳಾಗಿ ಕಾಣುತ್ತಾನೆ ಎಂದನಂತೆ ಕಿಶೋರ. ಇವಳು ನಂಬಲಿಲ್ಲ. ‘ನನ್ನ ಸ್ನೇಹಿತರು ನಿನಗೆ ಗೊತ್ತಿಲ್ಲ, ಮುಂದೆ ಮೆಚ್ಚಿದರೂ ಹಿಂದೆ ಆಡಿಕೊಳ್ಳುತ್ತ ಇರುತ್ತಾರೆ!’ ಎಂದಂದು ಇವಳ ಬಾಯಿ ಮುಚ್ಚಿಸಿದನಂತೆ. ಈ ಘಟನೆಯ ನಂತರ ಆಕೆ ಗಂಡನನ್ನು ಎಚ್ಚರಿಕೆಯಿಂದ ಗಮನಿಸಲು ಶುರುಮಾಡಿದಳು. ಆಗ ಅವನ ಸುಳ್ಳುತನ, ಪೊಳ್ಳುತನ, ಬೂಟಾಟಿಕೆ ಎಲ್ಲ ಒಂದೊಂದೇ ಬಯಲಿಗೆ ಬರತೊಡಗಿದವು.

ಹೋದ ತಿಂಗಳು ಕೀರ್ತಿಯ ಸಂಬಂಧಿಯ ಮಗುವಿನ ನಾಮಕರಣ ಇತ್ತು. ಸಮಾರಂಭಕ್ಕೆ ಜೊತೆ ಬರಲು ಗಂಡನನ್ನು ಕೇಳಿಕೊಂಡಳು. ಕಿಶೋರ ಅವೊತ್ತೇ ತನಗೆ ದಿಲ್ಲಿಗೆ ಹೋಗಬೇಕಾಗಿದೆ ಎಂದ. ಕೀರ್ತಿ ಅವನೊಡನೆ ದಿಲ್ಲಿಗೆ ಹೋಗುವ ಆಸೆ ಹೇಳಿಕೊಂಡಳು. ತಕ್ಷಣ ಕಿಶೋರ, ಅದಿನ್ನೂ ನಿಶ್ಚಿತವಾಗಿಲ್ಲ ಎಂದು ಜಾರಿಸಿದ. ನಾಮಕರಣವೋ ದಿಲ್ಲಿಯೋ ಒಟ್ಟಾರೆ ಗಂಡನ ಜೊತೆ ಸುತ್ತಬೇಕೆಂಬುದು ಕೀರ್ತಿಯ ಆಸೆ. ಸಮಾರಂಭದ ನಡುವೆ ಗಂಡನಿಗೆ ಫೋನ್ ಮಾಡಿದಾಗ ತಾನು ಆಫೀಸಿನಿಂದ ನೇರವಾಗಿ ದಿಲ್ಲಿಗೆ ಹೋಗುವ ವಿಮಾನದೊಳಗೆ ಕೂತಿದ್ದೇನೆ ಎಂದ. ಇವಳಿಗೆ ಆಶ್ಚರ್ಯವಾಯಿತು. ಯಾಕೆಂದರೆ ವೇಳಾಪಟ್ಟಿಯ ಪ್ರಕಾರ ಆಗ ವಿಮಾನ ಆಕಾಶದಲ್ಲಿತ್ತು! ಹಾರುತ್ತಿರುವ ವಿಮಾನಕ್ಕೆ ಮೊಬೈಲ್ ಸಂಪರ್ಕ ಸಿಗುವುದಿಲ್ಲ. ಹಾಗಾಗಿ ಅವನನ್ನು ನಂಬದೆ ವಿಮಾನದ ಟಿಕೆಟ್ ತೋರಿಸಲು ಹೇಳುತ್ತಿದ್ದಾಳೆ. ಇವನು ಟಿಕೆಟ್ ಸ್ನೇಹಿತನ ಹತ್ತಿರ ಇದೆ ಎಂದು ಮುಂದೆಹಾಕುತ್ತ ಹತ್ತು ದಿನವಾಯಿತು. ಇಂಥವನನ್ನು ಹೇಗೆ ನಂಬಲಿ?

ಇದರಿಂದ ಏನು ಅರ್ಥಮಾಡಿಕೊಂಡಿದ್ದಾಳೆ ಎಂದು ಕೇಳಿದಾಗ ಕೀರ್ತಿ ತರ್ಕ ಮುಂದಿಟ್ಟಳು. ಕಿಶೋರನಿಗೆ ಒಂದೋ ತನ್ನೊಂದಿಗೆ ಹೊರಹೋಗಲು ಇಷ್ಟವಿಲ್ಲ, ಅಥವಾ ಅವಳ ಸಂಬಂಧಿಕರ ಜೊತೆಗೆ ಬೆರೆಯಲು ಇಷ್ಟವಿಲ್ಲ. ಎರಡರಲ್ಲಿ ಯಾವುದೊಂದು ನಿಜವಾದರೂ ಆಕೆಗೆ ನುಂಗಲಾರದ ತುತ್ತಾಗಿದೆ.

ಸಂಬಂಧಿಕರ ಮಾತು ಬಂದಾಗ ಅವರಿಬ್ಬರ ಕುಟುಂಬಗಳ ವಿವರ ಕಲೆಹಾಕಿದೆ.

ಕೀರ್ತಿಯದು ಕೇರಳದ ಹಳ್ಳಿಯ ಸಂಪ್ರದಾಯಸ್ಥ ಕುಟುಂಬ. ಅಪ್ಪ ಜಮೀನು ಸಾಗುವಳಿ ಮಾಡುತ್ತಾನೆ. ಅಮ್ಮ ಹಾಗೂ ತಂಗಿ ಇದ್ದಾರೆ. ನಾಲ್ವರೂ ಭದ್ರವಾದ ಬಾಂಧವ್ಯದಲ್ಲಿ ಹೆಣೆದುಕೊಂಡಿದ್ದಾರೆ. ತೋಟದಲ್ಲಿ ಮನೆಯಿದ್ದು, ಮನೆಯಲ್ಲಿ ಪುಸ್ತಕಗಳ ಭಂಡಾರವಿದೆ. ಮಕ್ಕಳಿಬ್ಬರಿಗೂ ಓದುವ ಹುಚ್ಚು. ಮಾತುಕತೆ, ಚಟುವಟಿಕೆಯಿಂದ ಮನೆಯಲ್ಲಿ ಜೀವಂತಿಕೆ ಸದಾ ಲಾಸ್ಯವಾಡುತ್ತಿರುತ್ತದೆ. ಕೀರ್ತಿಗೆ ಶಾಸ್ತ್ರೀಯ ಸಂಗೀತದ ಹವ್ಯಾಸ ಇದೆ. ಆಗಾಗ ಮೈಸೂರಿಗೆ ಬಂದಿದ್ದು ಪಾಠ ಕಲಿಯುತ್ತಾಳೆ. ವೈಯಕ್ತಿಕ ನಿರ್ಧಾರದ ಸ್ವಾತಂತ್ರ್ಯ ಇದೆ. ಆ ಸ್ವಾತಂತ್ರ್ಯದ ಕಾರಣದಿಂದಲೇ ಎಲ್ಲರೂ ಬೇಡವೆಂದ ನಗರದ ಹುಡುಗನನ್ನು ಮೆಚ್ಚಿದ್ದು.

ಕಿಶೋರನ ಕುಟುಂಬ ತದ್ವಿರುದ್ಧ. ಕಿಶೋರ ತಡವಾಗಿ ಹುಟ್ಟಿದ ಏಕೈಕ ಸಂತಾನ. ತುಂಬಾ ನಾಜೂಕಾಗಿ ಬೆಳೆದಿದ್ದಾನೆ. ವಯಸ್ಸಾದ ಅಪ್ಪ ಅಮ್ಮ ಹೆಚ್ಚಾಗಿ ಮನೆಯಲ್ಲೇ ಇರುತ್ತಾರೆ. ಎಲ್ಲರೂ ಮಿತಭಾಷಿಗಳು. ಹಾಗಾಗಿ ಮನೆಯಲ್ಲಿ ಮೌನವೇ ಹೆಚ್ಚು. ನವದಂಪತಿಯ ಮಾತುಕತೆ ಏನಿದ್ದರೂ ಮಲಗುವ ಕೋಣೆಯಲ್ಲಿ ಮಾತ್ರ. ಬದುಕಿನಲ್ಲಿ ವೈವಿಧ್ಯತೆ ಇಲ್ಲ. ಇದೆಲ್ಲ ಆಕೆಗೆ ಉಸಿರು ಕಟ್ಟಿಸುತ್ತಿದೆ. ಅಲ್ಲದೆ ಈಕೆಯ ಸ್ವಾತಂತ್ರ್ಯವೂ ಮೊಟಕಾಗಿದೆ. ಉದಾಹರಣೆಗೆ, ಹಣಕ್ಕಾಗಿ ಗಂಡನನ್ನು ಕೇಳಿದರೆ ಅವನು ತನ್ನ ಗಳಿಕೆಯನ್ನು ಅಪ್ಪನ ಕೈಗೆ ಕೊಡುತ್ತಿದ್ದು, ಅಪ್ಪನನ್ನೇ ಕೇಳು ಎನ್ನುತ್ತಾನೆ. ಮಾವನನ್ನು ಕೇಳಲು ಸಂಕೋಚವಾಗಿ ಇವಳು ತನ್ನ ಉಳಿತಾಯದ ಹಣವನ್ನೇ ಖರ್ಚು ಮಾಡುತ್ತಾಳೆ. (ಕೀರ್ತಿಯು ಮದುವೆಗೆ ಮುಂಚೆ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿದ್ದಳು.) ವಿಚಿತ್ರವೆಂದರೆ, ಆಕೆ ತನ್ನ ಕೈಯಿಂದ ಖರ್ಚು ಮಾಡುವಾಗಲೆಲ್ಲ ಗಂಡ ನೋಡಿಯೂ ನೋಡದವನಂತೆ ಇರುತ್ತಾನೆ. ಸಂಗೀತದ ಅಭ್ಯಾಸಕ್ಕಾಗಿ ಮೈಸೂರಿನ ಪ್ರಯಾಣಕ್ಕೂ ಆಕ್ಷೇಪಣೆಯಿದೆ. ಒಂಟಿ ಪ್ರಯಾಣ ಸುರಕ್ಷಿತ ಅಲ್ಲವಂತೆ. ಆಕೆ ತವರಿನ ಹಳ್ಳಿಯಿಂದ ಮೈಸೂರಿಗೆ ಒಬ್ಬಳೇ ಹೋಗುತ್ತಿದ್ದಳು ಎನ್ನುವುದನ್ನು ಯಾರೂ ಕೇಳಿಸಿಕೊಳ್ಳುತ್ತಿಲ್ಲ.

ಈಗ ಕೀರ್ತಿ ನನ್ನನ್ನು ಭೇಟಿ ಮಾಡಿದ ಉದ್ದೇಶ ಏನು? ಇಂಥವನೊಡನೆ ಬಾಳುವುದು ಬೇಕಿಲ್ಲ. ಮದುವೆ ಮುರಿದುಕೊಂಡರೆ ಹೇಗಿದ್ದೀತು ಎಂದು ಯೋಚಿಸುತ್ತಿದ್ದಾಳೆ.

ಕೊನೆಯಲ್ಲಿ ಇನ್ನೊಂದು ಮಾತು ಸೇರಿಸಿದಳು: ಆಕೆಗೆ ಮುಟ್ಟು ಐದು ದಿನ ಮುಂದೆ ಹೋಗಿದೆ. ಗರ್ಭಿಣಿಯೆಂದು ಸಂದೇಹ ಬರುತ್ತಿದೆ.

ನನಗೆ ತಬ್ಬಿಬ್ಬಾಯಿತು. ನಾನು ಕೇಳಿದೆ: ‘ಗಂಡ ಬಿಡುವುದಾದರೆ ಗರ್ಭವನ್ನು ಏನು ಮಾಡುತ್ತೀರಿ?’ ಅದನ್ನು ತೆಗೆಸುತ್ತಾಳೆ ಎನ್ನುವಳೇನೋ ಎಂದು ಕಾಯುತ್ತಿದ್ದ ನನಗೆ ಬಂದ ಉತ್ತರ ಅನಿರೀಕ್ಷಿತವಾಗಿತ್ತು.

‘ತಂದೆ ಇಲ್ಲದಿದ್ದರೆ ಏನಂತೆ, ನನ್ನ ಮಗುವನ್ನು ನಾನೊಬ್ಬಳೇ ಬೆಳೆಸುತ್ತೇನೆ!’

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ).